# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 253 |
| ಉತ್ತರಿಸಬೇಕಾದ ದಿನಾಂಕ | 18.08.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ\ವಸತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರೇರಾ ಕಾಯ್ದೆ ರಾಜ್ಯದಲ್ಲಿ ಜಾರಿಗೆ ಬಂದಿದ್ದು ಯಾವಾಗ; ಕಾಯ್ದೆಯ ಮೂಲ ಉದ್ದೇಶವೇನು; ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕೇಂದ್ರ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಅನ್ನು ದಿನಾಂಕ:26.03.2016 ರಿಂದ ಜಾರಿಗೆ ತಂದಿರುತ್ತದೆ. ಇದಕ್ಕೆ ಪೂರಕವಾಗಿ ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅನ್ನು ದಿನಾಂಕ:11.07.2017ರಂದು ಅಧಿಸೂಚಿಸಿರುತ್ತದೆ.<br><br>ರೇರಾ ಕಾಯ್ದೆಯನ್ವಯ 500 ಚ.ಮೀಟರ್ ಗಿಂತ ಹೆಚ್ಚಿನ ವಿಸ್ತೀರ್ಣವುಳ್ಳ ಹಾಗೂ 8 ಯೂನಿಟ್‌ಗಳಿಗಿಂತ ಹೆಚ್ಚು ವಸತಿ ಸಮುಚ್ಚಯಗಳನ್ನು ಒಳಗೊಂಡ ಎಲ್ಲಾ ಯೋಜನೆಗಳು ಕಡ್ಡಾಯವಾಗಿ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಡಿಯಲ್ಲಿ ನೋಂದಣಿ ಮಾಡುವುದು ಇದರ ಮೂಲ ಉದ್ದೇಶವಾಗಿದ್ದು, ಗೃಹ/ ನಿವೇಶನ ಖರೀದಿದಾರರ ಹಿತಾಸಕ್ತಿ ಕಾಪಾಡಲು ಕಾರ್ಯನಿರ್ವಹಿಸುತ್ತಿದೆ.<br><br>ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರು ಇಚ್ಛೆ ಪಟ್ಟ ಪ್ರದೇಶಗಳಲ್ಲಿ ನಿವೇಶನ/ ಅಪಾರ್ಟ್‌ಮೆಂಟ್ / ಮನೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತದೆ ಹಾಗೂ ರಿಯಲ್ ಎಸ್ಟೇಟ್ ಉದ್ದಿಮೆದಾರರು ಹಾಗೂ ಏಜೆಂಟರ ವಿರುದ್ಧ ದೂರುಗಳನ್ನು ದಾಖಲಿಸಿ ಪರಿಹಾರ ಪಡೆಯಲು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮವು ಸಾರ್ವಜನಿಕರಿಗೆ ಒಂದು ಕಾನೂನುಬದ್ಧ ವೇದಿಕೆಯನ್ನು ಒದಗಿಸಿಕೊಟ್ಟಿದೆ. ಹಣ ಕಟ್ಟಿಸಿಕೊಂಡು ನಿವೇಶನ/ ಅಪಾರ್ಟ್‌ಮೆಂಟ್ / ಮನೆಗಳನ್ನು ನೋಂದಾಯಿಸಿಕೊಳ್ಳಲು ವಿಳಂಬ ಮಾಡುವ / ಮೋಸ ಮಾಡುವ ರಿಯಲ್ ಎಸ್ಟೇಟ್ ಉದ್ದಿಮೆದಾರರು ಹಾಗೂ ಏಜೆಂಟರ ವಿರುದ್ಧ ಸಾರ್ವಜನಿಕರು ದೂರುಗಳನ್ನು ದಾಖಲಿಸಿ ಪರಿಹಾರ ಪಡೆದುಕೊಳ್ಳಬಹುದಾಗಿದೆ. ಈ ಪ್ರಾಧಿಕಾರದ ಮೂಲಕ ಗ್ರಾಹಕರ ಹಕ್ಕು ಮತ್ತು ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವು ಕ್ರಮ ಕೈಗೊಂಡಿರುತ್ತದೆ.<br><br>ಮೇಲಿನ ಉದ್ದೇಶವನ್ನು ಊರ್ಜಿತಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅನ್ನು ಜಾರಿಗೊಳಿಸಿ ಸದರಿ ನಿಯಮಗಳನ್ವಯ ಅಗತ್ಯ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಆ) | ರೇರಾ ಕಾಯ್ದೆಯಡಿ ಈವರೆಗೆ ಎಷ್ಟು ದೂರುಗಳು ದಾಖಲಾಗಿವೆ; ಎಷ್ಟು ದೂರುಗಳಿಗೆ ಪರಿಹಾರ ಒದಗಿಸಲಾಗಿದೆ; ದೂರುಗಳ ಹಿನ್ನೆಲೆಯಲ್ಲಿ ಎಷ್ಟು ಬಿಲ್ಡರ್‌ಗಳ ವಿರುದ್ಧ ಕ್ರಮಕ್ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರೇರಾ ಕಾಯ್ದೆಯಡಿ ಪ್ರಾಧಿಕಾರದಲ್ಲಿ ಸ್ವೀಕೃತವಾದ ದೂರುಗಳ ವಿವರ ಈ ಕೆಳಕಂಡಂತಿರುತ್ತದೆ. (see tables below) |

| ಕ್ರ. ಸಂ | ಸ್ವೀಕೃತವಾದ ದೂರುಗಳು | ವಿಲೇವಾರಿಯಾದ ದೂರುಗಳು | ಬಾಕಿ ಇರುವ ದೂರುಗಳು | ಪರಿಹಾರ ಒದಗಿಸಿರುವ ವಿವರ |
|---|---|---|---|---|
| 1 | 13293 | 11453 | 1840 | 5624 |

ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ:

| ಕ್ರ. ಸಂ | ಜಿಲ್ಲೆಗಳು | ಸ್ವೀಕೃತವಾದ ದೂರುಗಳು | ವಿಲೇವಾರಿಯಾದ ದೂರುಗಳು | ಬಾಕಿ ಇರುವ ದೂರುಗಳು | ಪರಿಹಾರ ಒದಗಿಸಿರುವ ದೂರುಗಳು |
|---|---|---|---|---|---|
| 1 | ಬೆಂಗಳೂರು ನಗರ | 11418 | 9912 | 1506 | 4715 |
| 2 | ಬೆಂಗಳೂರು ಗ್ರಾಮಾಂತರ | 1325 | 1091 | 234 | 683 |
| 3 | ರಾಮನಗರ | 25 | 07 | 18 | 05 |
| 4 | ಕೋಲಾರ | 40 | 28 | 12 | 11 |
| 5 | ಚಿಕ್ಕಬಳ್ಳಾಪುರ | 63 | 41 | 22 | 21 |
| 6 | ಶಿವಮೊಗ್ಗ | 02 | 0 | 02 | 0 |
| 7 | ಮೈಸೂರು | 123 | 122 | 01 | 87 |
| 8 | ಬೆಳಗಾವಿ | 42 | 40 | 02 | 22 |
| 9 | ದಕ್ಷಿಣ ಕನ್ನಡ | 133 | 98 | 35 | 44 |
| 10 | ದಾವಣಗೆರೆ | 04 | 03 | 01 | 0 |
| 11 | ಧಾರವಾಡ | 39 | 35 | 04 | 0 |
| 12 | ಕಲಬುರಗಿ | 05 | 05 | 0 | 0 |
| 13 | ಉಡುಪಿ | 16 | 15 | 01 | 08 |
| 14 | ಮಂಡ್ಯ | 37 | 37 | 0 | 19 |
| 15 | ಬಾಗಲಕೋಟೆ | 05 | 05 | 0 | 01 |
| 16 | ಬಳ್ಳಾರಿ | 03 | 01 | 02 | 0 |
| 17 | ತುಮಕೂರು | 03 | 03 | 0 | 02 |
| 18 | ವಿಜಯಪುರ | 01 | 01 | 0 | 0 |
| 19 | ಚಿತ್ರದುರ್ಗ | 05 | 05 | 0 | 05 |
| 20 | ಗದಗ | 01 | 01 | 0 | 0 |
| 21 | ಉತ್ತರ ಕನ್ನಡ | 01 | 01 | 0 | 0 |
| 22 | ಹಾಸನ | 02 | 02 | 0 | 0 |
| | ಒಟ್ಟು | 13293 | 11453 | 1840 | 5623 |

| | | |
|---|---|---|
| ಇ) | ರೇರಾದಲ್ಲಿ ನೊಂದಣಿಯಾಗದ ವಸತಿ ಯೋಜನೆಗಳ ವಿರುದ್ಧ ಎಷ್ಟು ದೂರುಗಳು ಸಲ್ಲಿಕೆಯಾಗಿದೆ; ದೂರುಗಳ ಕುರಿತು ತನಿಖೆ ಆಗಿದೆಯೇ; ಎಷ್ಟು ದೂರುಗಳ ವಿರುದ್ಧ ಯಾವ ಕ್ರಮಕ್ಕೈಗೊಳ್ಳಲಾಗಿದೆ, (ಜಿಲ್ಲಾವಾರು ವಿವರ ನೀಡುವುದು); | ರೇರಾದಲ್ಲಿ ನೊಂದಣಿಯಾಗದ ವಸತಿ ಯೋಜನೆಗಳ ವಿರುದ್ಧ ಒಟ್ಟು 2305 ದೂರುಗಳು ದಾಖಲಾಗಿದ್ದು, ಸದರಿ ದೂರುಗಳ ಪೈಕಿ 2146 ದೂರುಗಳಿಗೆ ಸಂಬಂಧಿಸಿದಂತೆ, ಪ್ರಾಧಿಕಾರದ ವಿವಿಧ ಪೀಠಗಳಲ್ಲಿ ವಿಚಾರಣೆ ನಡೆಸಿ, ವಿಲೇಗೊಳಿಸಲಾಗಿರುತ್ತದೆ. ಉಳಿದ 159 ಪ್ರಕರಣಗಳು ವಿಚಾರಣಾ/ ಪರಿಶೀಲನಾ ಹಂತದಲ್ಲಿರುತ್ತದೆ. |

ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ:

| ಕ್ರ. ಸಂ | ಜಿಲ್ಲೆಗಳು | ದೂರು/ ಪ್ರಕರಣ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 2124 |
| 2 | ಬೆಂಗಳೂರು ಗ್ರಾಮಾಂತರ | 66 |
| 3 | ಉಡುಪಿ | 10 |
| 4 | ಮೈಸೂರು | 31 |
| 5 | ಧಾರವಾಡ | 22 |
| 6 | ಬೆಳಗಾವಿ | 11 |
| 7 | ದಕ್ಷಿಣ ಕನ್ನಡ | 20 |
| 8 | ಬಾಗಲಕೋಟೆ | 05 |
| 9 | ಚಿತ್ರದುರ್ಗ | 05 |
| 10 | ಬಳ್ಳಾರಿ | 03 |
| 11 | ದಾವಣಗೆರೆ | 02 |
| 12 | ಶಿವಮೊಗ್ಗ | 02 |
| 13 | ತುಮಕೂರು | 01 |
| 14 | ಕಲಬುರ್ಗಿ | 01 |
| 15 | ಹಾಸನ | 02 |
| | ಒಟ್ಟು | 2305 |

| | | |
|---|---|---|
| ಈ) | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಕಾಯ್ದೆ ಉಲ್ಲಂಘಿಸುವ ಬಿಲ್ಡರ್‌ಗಳಿಗೆ ವಿಧಿಸಿರುವ ದಂಡದ ಮೊತ್ತ ಎಷ್ಟು; ದಂಡದ ಮೊತ್ತದಲ್ಲಿ ವಸೂಲಿ ಮಾಡಿರುವ ಮತ್ತು ವಸೂಲಾಗಲು ಬಾಕಿ ಇರುವ ಮೊತ್ತ ಎಷ್ಟು; | ರಿಯಲ್ ಎಸ್ಟೇಟ್ ಯೋಜನೆಗಳಿಗೆ ಸಂಬಂಧಿಸಿದಂತೆ, ರೇರಾ ಪ್ರಾಧಿಕಾರಕ್ಕೆ ಪ್ರಸ್ತುತ ಸಾಲಿನವರೆವಿಗೂ ಸಲ್ಲಿಸಲಾಗಿರುವ ವಾರ್ಷಿಕ ವರದಿ ಹಾಗೂ ತ್ರೈಮಾಸಿಕ ವಾರ್ಷಿಕ ವರದಿಯನ್ನು ಸಲ್ಲಿಸುವಲ್ಲಿ ವಿಳಂಬವಾಗಿರುವುದಕ್ಕೆ ಅಭಿವೃದ್ಧಿದಾರರಿಗೆ ಒಟ್ಟು ರೂ.40 ಕೋಟಿ ದಂಡ ಮೊತ್ತವನ್ನು ವಿಧಿಸಲಾಗಿದ್ದು, ಸದರಿ ದಂಡದ ಮೊತ್ತದಲ್ಲಿ ಒಟ್ಟು ರೂ.2,89,84,560/-ಗಳನ್ನು ವಸೂಲಾತಿ ಮಾಡಲಾಗಿದೆ.<br><br>ಉಳಿಕೆ ರೂ.38.70 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ, ರೇರಾ ಕಾಯ್ದೆಯನ್ವಯ ಭೂಕಂದಾಯ ಬಾಕಿ ಎಂದು ಪರಿಗಣಿಸಿ, ರೇರಾ ಪ್ರಾಧಿಕಾರದಿಂದ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವಾದ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ವಸೂಲಾತಿ ಕ್ರಮ ಜರುಗಿಸಲು ಕಳುಹಿಸಿಕೊಡಲಾಗಿದೆ. |
| ಉ) | ಬಿಲ್ಡರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ರೇರಾಗೆ ಸರ್ಕಾರ ಶಾಸನಾತ್ಮಕ ಅಧಿಕಾರ ನೀಡಿದೆಯೇ; ಶಾಸನಾತ್ಮಕ ಅಧಿಕಾರ ನೀಡುವ ಕುರಿತು ಸರ್ಕಾರದ ನಿಲುವೇನು? | ಭಾರತ ಸರ್ಕಾರದ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ, 2016ರನ್ನು ದಿನಾಂಕ:26.03.2016ರಿಂದ ಜಾರಿಗೆ ಬಂದಿದ್ದು, ಸದರಿ ಕಾಯ್ದೆಗೆ ಅನುಗುಣವಾಗಿ ನಿಯಮಗಳನ್ನು ರೂಪಿಸಬೇಕಾಗಿರುತ್ತದೆ. ಅದರಂತೆ, ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅನ್ನು ರೂಪಿಸಿಕೊಂಡು ದಿನಾಂಕ:11.07.2017ರಂದು ಜಾರಿಗೊಳಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಕಾಯ್ದೆ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ವಯ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ವಇ 169 ರೇರಾ 2026]

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ ಸಚಿವರು.